# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SC No. 84/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಚಂದ್ರಶೇಖರ್** | **PW – 1** |
| ತಂದೆಯ ಹೆಸರು | : | **ಸುಬ್ಬಯ್ಯ** | **CW – 2** |
| ವಯಸ್ಸು | : | **52 ವರ್ಷ** | |
| ವೃತ್ತಿ | : | **ವ್ಯವಸಾಯ** | |
| ವಾಸ | : | **ಬೇಳೂರು ಬಸವನಹಳ್ಳಿ ಗ್ರಾಮ,<br>ಸೋಮವಾರಪೇಟೆ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 22-08-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಚಾಸಾ-1, ಚಾಸಾ-3 ರಿಂದ ಚಾಸಾ-6 ಇವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ಆರೋಪಿತರು ಚಾಸಾ-3 ರವರ ಮನೆಯ ಮುಂದಿನ ಅಂಗಳದಲ್ಲಿ ಪೂಜೆ ಸಮಯದಲ್ಲಿ ಆರೋಪಿತರು ನಂದೀಶ್ ಈತನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಹೆದರಿಸಿ ಬೀರ್ ಬಾಟಲಿನಿಂದ ಹೊಡೆದು ಹೊಟ್ಟೆಗೆ ಚುಚ್ಚಿ ಕೊಲೆ ಮಾಡಲು ಪ್ರಯತ್ನ ಮಾಡಿರುವುದಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು– ಸರ್ಕಾರಿ ಅಭಿಯೋಜಕರಿಂದಃ</u>**

1. ದಿನಾಂಕ 31.10.2023 ರಂದು ಮಧ್ಯಾಹ್ನ 1.30 ಗಂಟೆಗೆ ಚಾಸಾ–3 ರವರ ಮನೆಯ ಮುಂದಿನ ಅಂಗಳದಲ್ಲಿ ಪೂಜೆ ಸಮಯದಲ್ಲಿ ಆರೋಪಿತರು ನಂದೀಶ್ ಈತನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು, ಅವಾಚ್ಯಶಬ್ದದಿಂದ ಬೈದು, 1 ನೇ ಆರೋಪಿತನು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಬೀರ್ ಬಾಟಲಿಯನ್ನು ಕಲ್ಲಿಗೆ ಹೊಡೆದು ನಂದೀಶನ ಹೊಟ್ಟೆಯ ಭಾಗಕ್ಕೆ ಚುಚ್ಚಿದನು ಎಂದು ಸೂಚಿಸುವುದು ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿತನು 1 ನೇ ಆರೋಪಿತನಿಂದ ಬೀರ್ ಬಾಟಲಿಯನ್ನು ಕಸಿದುಕೊಂಡು ನಂದೀಶನ ಬೆನ್ನಿನ ಎಡಭುಜಕ್ಕೆ ಹೊಡೆದಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ಆ ಸಮಯದಲ್ಲಿ 3 ನೇ ಆರೋಪಿತನು ನಂದೀಶನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದನು ಎಂದು ಸೂಚಿಸುವುದು ಸರಿಯಲ್ಲ. ನಾನು ಜಗಳ ಬಿಡಿಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಪೊಲೀಸರ ಮುಂದೆ ಈಗೆ ಓದಿ ಹೇಳಿದಂತೆ "ನಾನು ಈ ಮೇಲಿನ.........................ಗುರುತಿಸುತ್ತೇನೆ" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ–1** ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು– 1 ರಿಂದ 3 ನೇ ಆರೋಪಿತರ ಪರ ವಕೀಲರಾದ ಶ್ರೀ. ಕೆ.ಎ.ಕೆ.ಆರ್ ರವರಿಂದಃ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೊಡಗು–ಮಡಿಕೇರಿ.